ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಆರ್ಎನ್ಎಸ್ - 19

4ನೇ ವರ್ಷ 44ನೇ ಸಂಚಿಕೆ ಕೊಪ್ಪ 13-7-1986 ಭಾನುವಾರ ಬೆಲೆ 20 ಪೈಸೆ

ಶಂಕರ್ ಕಂಪೆನಿ ವಿವಾದ

ನಿರ್ಣಾಯಕ ಸಭೆ ಮುಂದಕ್ಕೆ

ಕೊಪ್ಪ: ಶಂಕರ್ ಕಂಪೆನಿ ಕಾರ್ಮಿಕ ಸಂಘದ ಖಜಾಂಚಿ ಸಂಜೀವ ಅವರನ್ನು ಚಿಕ್ಕಮಗಳೂರಿನಿಂದ ವಾಪಸ್ ಕರೆಸಿ ಕೊಳ್ಳುವ ತಾರೀಕನ್ನು ನಿಗದಿಗೊಳಿಸಲು ಜು. 12ರಂದು ನಡೆಯಬೇಕಿದ್ದ ಮಾತುಕತೆ ಮುಂದೆ ಹೋಯಿತು.

ಮಾತುಕತೆಯಲ್ಲಿ ಭಾಗವಹಿಸಬೇಕಿದ್ದ ಆಯನೂರು ಮಂಜುನಾಥ್ ತಮ್ಮ ಸೋದರಿ ತೀರಿಕೊಂಡ ಕಾರಣ ತನಗೆ ಬರಲಾಗುವುದಿಲ್ಲ. ಆದರೆ ಜು.3ರ ಒಪ್ಪಂದದ ಬೆಳಕಿನಲ್ಲಿ ತಕ್ಷಣ ಸಂಜೀವರನ್ನು ಹಿಂದಕ್ಕೆ ಕರೆಸಿಕೊಳ್ಳುವ ಮೂಲಕ ಸಮಸ್ಯೆಯನ್ನು ಇತ್ಯರ್ಥಗೊಳಿಸಿ ಎಂದು ಕೋರಿ ರಮೇಶರಾಯರಿಗೆ ಪತ್ರ ಬರೆದಿದ್ದರು. ಅದೇ ರೀತಿ ಜೋಸೆಫ್ ಪ್ರಕರಣದಲ್ಲೂ ಸಹ ದಾರಾಳ ನಿಲುವು ತಳೆಯುತ್ತೇನೆಂದು ಹೇಳಿರುವ ಪ್ರಕಾರ ಅದನ್ನೂ ಇತ್ಯರ್ಥಗೊಳಿಸಲು ಕೇಳಿದ್ದರು.

ಮಾತುಕತೆಗಾಗಿ ಸಂಘದ ಅಧ್ಯಕ್ಷ ಸತ್ಯನಾರಾಯಣ ಭಟ್ ಮಂಗಳೂರಿನಿಂದ ಬಂದಿದ್ದರು. ಆದರೆ ಯಾವುದೇ ಮಾತುಕತೆ ನಡೆಯಲಿಲ್ಲ. ಮಂಜುನಾಥ್ ಪತ್ರಕ್ಕೆ ಉತ್ತರವಾಗಿ, ಮಾತುಕತೆಗೆ ಇನ್ನೊಂದು ದಿನ ನಿಗದಿ ಮಾಡುವಂತೆ ಸೂಚಿಸಿ ರಮೇಶ್ ರಾವ್ ಪತ್ರ ಬರೆದಿದ್ದರೆಂದು ತಿಳಿದು ಬಂದಿದೆ.

ಸಂಶಯಗಳು

"ಸಂಜೀವನನ್ನು ಚಿಕ್ಕಮಗಳೂರಿನಿಂದ ಕರೆಸಿಕೊಳ್ಳುವ ದಿನವನ್ನು ಒಪ್ಪಂದದಲ್ಲೇ ಅಡಕ ಮಾಡಿಬಿಡಬೇಕಿತ್ತು. ಈಗ ಅವರು ಖಂಡಿತಾ ಹಿಂದಕ್ಕೆ ಕರೆಸಿಕೊಳ್ಳುವುದಿಲ್ಲ" ಎಂದು ಹಲವು ಮಂದಿ ಸಾರ್ವಜನಿಕರು ತೀವ್ರ ಸಂಶಯ ವ್ಯಕ್ತಪಡಿಸುತ್ತಿದ್ದಾರೆ.

ಆದರೆ ರಮೇಶರಾವ್ ಮತ್ತು ಕಂಪೆನಿಯ ವಕೀಲರು ನೀಡಿರುವ ಆಶ್ವಾಸನೆಗಳು ಗಂಭೀರ (Solemn) ಅರ್ಥಪೂರ್ಣವಾಗಿದ್ದಲ್ಲಿ ಇಂಥ ಸಂಶಯಕ್ಕೆ ಎಡೆಯಿಲ್ಲವೆನ್ನಿಸುತ್ತದೆ.

ರಾಯರು ಹೇಳಿದ್ದು

ಇಡೀ ಕಾರ್ಮಿಕ ಸಮೂಹ ಯೂನಿಯನ್ನಿನ ಅಳಿವು-ಉಳಿವೇ ತಮ್ಮ ಅಳಿವು-ಉಳಿವು ಎಂದುಕೊಂಡು, ಎಂಥ ಒತ್ತಡವನ್ನೂ ಧೈರ್ಯವಾಗಿ ಎದುರಿಸುತ್ತಾ ಹೋರಾಟದಲ್ಲಿದ್ದಾಗ, ಅಂಥ ಉದ್ವಿಗ್ನತೆಯ ವಾತಾವರಣದಲ್ಲೂ ಸಹ ಸಂಘದ ಮುಖಂಡ ಮಂಜುನಾಥ್ ಬಿಗುಮಾನ ಬಿಟ್ಟು ರಾಯರನ್ನು ಕಾಣಲು ಹೋದದ್ದು ಅವರಿಗೊಂದು ಕಗ್ಗಂಟು ಬಿಡಿಸಲು ದಾರಿ ದೊರೆತಂತೆ ಅನಿಸಿರಬೇಕು.

ಆದ್ದರಿಂದಲೇ ಅವರು ಕೂಡಲೇ ಒಂದು ಒಪ್ಪಂದಕ್ಕೆ ತಳಹದಿ ಹಾಕಿದರು. ಅವರ ಒಂದೇ ಕೋರಿಕೆ ಎಂದರೆ, "ಕೆಲವು ದಿನಗಳ ಮಟ್ಟಿಗಾದರೂ ಸಂಜೀವ ಚಿಕ್ಕಮಗಳೂರಿಗೆ ಹೋಗಲಿ. ಇಲ್ಲಿ ವಾತಾವರಣ ತಿಳಿಗೊಂಡ ಕೂಡಲೇ ಮಾತುಕತೆಗೆ ಬನ್ನಿ. ಕೂಡಲೇ ಸೆಟ್‌ರೈಟ್ ಮಾಡುತ್ತೇನೆ. ಜೋಸೆಫ್ ಪ್ರಕರಣವನ್ನು ಸಹ ಅತ್ಯಂತ ಸಹಾನುಭೂತಿಯಿಂದ ಇತ್ಯರ್ಥಪಡಿಸುತ್ತೇನೆ. ಗೋಪಾಲ್‌ದಂತೂ ಏನೂ ಪ್ರಕರಣವೇ ಇಲ್ಲ. ಹೊಸ ಬಸ್ಸಿನ ಲೈಸೆನ್ಸ್ ತಂಡಾದುದು ಹೇಗೆಂದು ವಿಚಾರ ಮಾಡಲಿಕ್ಕೆಮಾತ್ರ ಕಂಪೆನಿಗೆ ಕರೆಸಿದ್ದು...." (ಈಗ ಅವರನ್ನು ಅದೇ ಲೈನಿಗೇ ಕಳಿಸಲಾಗಿದೆ.)

ಸಂಧಾನ ನಡೆಯುತ್ತಿದ್ದಾಗ ರಾತ್ರಿ ಒಂದೂವರೆಯ ಹೊತ್ತಿಗೆ ಪ್ರವಾಸಿ ಮಂದಿರದ ಹತ್ತಿರ ಬಂದಿದ್ದಾಗ ಸಹ ಅವರು ಹೇಳಿದ್ದು– "ನೀವು ಮಾತುಕತೆಗೆ ಬಂದ ರೀತಿ ನನಗೆ ಬಹಳ ಹಿಡಿಸಿದೆ. ಇನ್ನು ಮುಂದೆ ಸಹ ಇದೇ ರೀತಿ ಯಾವುದೇ ವಿಚಾರವಿದ್ದರೂ ನೇರವಾಗಿ ನನ್ನ ಹತ್ತಿರ ಮಾತುಕತೆಗೆ ಬನ್ನಿ. ನನ್ನ ಕೈಲಾದಷ್ಟು ಎಲ್ಲವನ್ನೂ ಕೊಡುತ್ತೇನೆ. ನಿಮ್ಮ ಯೂನಿಯನ್ನನ್ನೂ ಒಪ್ಪುತ್ತೇನೆ. ಯೂನಿಯನ್ನಿಗೆ ಏನೂ ತೊಂದರೆಕೊಡುವುದಿಲ್ಲ ಆದರೆ ಸುಮ್ಮ ಸುಮ್ಮನೆ ನಾವು ಎಲ್ಲೋ ಇರುವಾಗ ಇಲ್ಲಿ ಸಮಸ್ಯೆ ತಂದಿಡಬೇಡಿ. ಕಾರ್ಮಿಕರಾದರೂ ಅನಗತ್ಯವಾಗಿ ಬೇಜವಾಬ್ದಾರಿತನ, ಅಶಿಸ್ತು ತೋರಿದರೆ ಮಾತ್ರ ನಾನು ಸಹಿಸುವುದಿಲ್ಲ. ಅದಕ್ಕೆ ಅವಕಾಶವಿಲ್ಲದಂತೆ ಪರಸ್ಪರ ಸೌಹಾರ್ದದಿಂದಿರೋಣ...." ಇತ್ಯಾದಿ

ಇಷ್ಟೆಲ್ಲ ಹೇಳಿದ ರಮೇಶರಾವ್ ಈಗ ತಮ್ಮ ಮಾತು ಮುರಿಯುತ್ತಾರೆಯೆ? ಇಷ್ಟೇ ಅಲ್ಲ.

ವಕೀಲರ ವಚನ

ಸಂಧಾನದಲ್ಲಿ ಕಂಪೆನಿಯ ಪರವಾಗಿ (ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘದ ಪತಿಯಿಂದ) ಭಾಗವಹಿಸಿದ್ದ ಚಿಕ್ಕಮಗಳೂರಿನ ಖ್ಯಾತ ವಕೀಲ ಟಿ. ಎಂ. ಕೃಷ್ಣಮೂರ್ತಿಯವರೂ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ– "ಸಂಜೀವ ಚಿಕ್ಕಮಗಳೂರಲ್ಲಿರಬೇಕಾಗುವ ಅವಧಿಯನ್ನು ಅನಗತ್ಯ ಲಂಬಿಸುವುದಿಲ್ಲ." (It won't be unduly long, I can assure you.")......... "ಇದರಲ್ಲಿ ಖಂಡಿತಾ ಮೋಸವಿಲ್ಲ. ಇದನ್ನು ಬರಹದಲ್ಲಿ ಕಾಣಿಸಲಾಗದಿದ್ದರೂ ಇದೊಂದು ಸಭ್ಯರ ಒಡಂಬಡಿಕೆ"("It is a gentle-men's understanding.")...... ಇತ್ಯಾದಿ. ಇದನ್ನೆಲ್ಲ ಅವರು ಹಿರಿಯ ಪೋಲೀಸ್ ಮತ್ತು ಕಾರ್ಮಿಕ ಅಧಿಕಾರಿಗಳು, ಪತ್ರಕರ್ತರು ಸೇರಿದಂತೆ ಸುಮಾರು 15–20 ಜನ ಗಣ್ಯರಿದುರು ಹೇಳಿರುವುದು.

ಇಷ್ಟೆಲ್ಲ ಇರುವಾಗಲೂ ಕಂಪೆನಿ ಮಾಲೀಕರು ವಚನ ಮುರಿಯಬಲ್ಲರೆ?

ಸಾರ್ವಜನಿಕರ ಆತಂಕ

ಇತ್ತ ಈ ಮುಷ್ಕರದ ವಿಚಾರವ[illegible] ಅರ್ಧಂಬರ್ಧ ಗ್ರಹಿಸಿರುವ ಹಲವು ಸ[illegible] ಜನಿಕರು ಮತ್ತು ಗ್ರಾಮೀಣ ಜನರ[illegible] ಲ್ಲಲ್ಲಿ ಒಂದು ಆತಂಕವನ್ನು ವ್ಯಕ್ತಪ[illegible] ವುದು ಕಂಡಿದೆ. ಕೇವಲ ಒಬ್ಬ ನೌ[illegible] ವರ್ಗಾವಣೆಗೇ ಮುಷ್ಕರ ಹೂಡಿದ [illegible] ರ್ಮಿಕರು ಇನ್ನು ಇದೇ ಅಸ್ತ್ರವನ್ನೇ [illegible] ಪದೇ ಬಳಸತೊಡಗಿದರೆ ಹಳ್ಳಿಗಾಡಿ[illegible] ರಿಗೆ ವ್ಯವಸ್ಥೆಯ ಗತಿಯೇನು? [illegible] ವ್ಯಾಪಾರವನ್ನೇ ಮುಖ್ಯಾಲು ಪಾಲ[illegible] ಲಂಬಿಸಿರುವ ಪೇಟೆಗಳ ವ್ಯಾಪಾ[illegible] ಹಾರಗಳ ಗತಿಯೇನು? ಕೆಲವು ಸ[illegible] ವ್ಯವಸ್ಥೆ ತೀರಾ ಹದಗೆಟ್ಟಾಗ ಗ್ರಾ[illegible] ರಸ್ತೆ ತಡೆ ಮುಂತಾದ ಚಳುವಳಿ [illegible] ದುಂಟು. ಆಗೆಲ್ಲ ಇವರು ಅದ[illegible] ಮುಷ್ಕರ ಹೂಡಿಬಿಟ್ಟರೆ?.... ಇ[illegible]

ಇಲ್ಲಿ ಎರಡು ವಿಚಾರಗಳನ[illegible]

(2ನೆ[illegible]

ಕುಶಲಕರ್ಮಿ ತರಬೇತಿಗೆ ಅರ್ಜಿ ಆಹ್ವಾನ

ಕೊಪ್ಪ: ಚಿಕ್ಕಮಗಳೂರು ಜಿಲ್ಲಾ ಕೈಗಾರಿಕಾ ಕೇಂದ್ರದ ಆಶ್ರಯದಲ್ಲಿ 1986-87ನೇ ಸಾಲಿನಲ್ಲಿ ವಿವಿಧ ಕಸುಬುಗಳಲ್ಲಿ ಸ್ಟೈಪೆಂಡ್ ಸಹಿತ ತರಬೇತಿಗಾಗಿ ಅರ್ಜಿಗಳನ್ನು ಕರೆಯಲಾಗಿದೆ. ವಿವರಗಳು ಇಂತಿವೆ–

1) ವಿಶೇಷ ಘಟಕ ಯೋಜನೆ: ಹರಿಜನ ಯುವಕ– ಯುವತಿಯರಿಗಾಗಿ ಮಾತ್ರ.

2) ಗ್ರಾಮೀಣ ಕುಶಲ ಕರ್ಮಿ ಯೋಜನೆ: "ಆರ್ಥಿಕವಾಗಿ ಹಿಂದುಳಿದಿರುವ" ಗುಂಪಿಗೆ ಸೇರುವ ಉಳಿದೆಲ್ಲ ಜಾತಿ–ಜನಾಂಗಗಳವರಿಗಾಗಿ.

ವಿದ್ಯಾರ್ಹತೆ: ಹೊಲಿಗೆ ತರಬೇತಿಗೆ 7ನೇ ತರಗತಿ ಇತರೆ – ಎಸ್ಸೆಸ್ಸೆಲ್ಸಿ. ತರಬೇತಿಯ ಅವಧಿ 6 ತಿಂಗಳು. ವಯೋಮಿತಿ 18ರಿಂದ 30 ವರ್ಷಗಳು. ಅರ್ಜಿ ಸಲ್ಲಿಸಲು ಕಡೇ ದಿನ 25-7-1936. ಹೆಚ್ಚಿನ ವಿವರಗಳನ್ನು ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಈ ಕೆಳಕಂಡ ದಿನಗಳಲ್ಲಿ ಪಡೆಯಬಹುದು:–

ಶೃಂಗೇರಿ — ಸೋಮವಾರ, ಗುರುವಾರ;
ಕೊಪ್ಪ — ಮಂಗಳವಾರ, ಶುಕ್ರವಾರ;
ನ. ರಾ. ಪುರ — ವಾರದ ದಿನಗಳಲ್ಲಿ (ರಜಾ ದಿನ ಹೊರತು)

ಪಡಿತರ ಕಾರ್ಡಿಗೆ ಪೌಷ್ಟಿಕ ಆಹಾರ (ಹಿಂಡಿ)!

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಇಲ್ಲಿ ಹಂಚಲಾಗುತ್ತಿರುವ ರೇಶನ್ ಅಕ್ಕಿಯಲ್ಲಿ ಒಂದು ಚೀಲದಲ್ಲಿ ಸುಮಾರು 10 ಕಿಲೋದಷ್ಟು ಹಿಂಡಿ ಇದ್ದರೆ, 2 ಚೀಲಗಳಲ್ಲಿ ವಿಪರೀತ ಡೆಟ್ಟಾಲ್ ವಾಸನೆಯಿದ್ದು ಯಾವುದಕ್ಕೂ ಬಳಸುವಂತಿರಲಿಲ್ಲ. ಇವನ್ನು ನೌಕರರ ಸಹಕಾರ ಸಂಘದಲ್ಲಿ ಹಾಗೆಯೇ ಇಟ್ಟು ಅವುಗಳ ಸ್ಯಾಂಪಲ್ಲನ್ನು ಜಿಲ್ಲಾಧಿಕಾರಿಗಳಿಗೆ ಕಳಿಸಲಾಗಿದೆ.

ಇನ್ನು ಕೆಲವು ಚೀಲಗಳಲ್ಲಿ ಅತ್ಯುತ್ತಮ ಅಕ್ಕಿಯೂ ಬರುತ್ತಿದೆ. ಆದರೆ ಎಲ್ಲದರಲ್ಲೂ ಕಡೇ ಪಕ್ಷ ಶೇ. 20ರಷ್ಟು ಭತ್ತವೇ ಇರುತ್ತದೆ.

ರಿಕ್ಷಾದಲ್ಲಿ ಬಿಟ್ಟ ಪರ್ಸಿನಿಂದ ಹಣ ನಾಪತ್ತೆ — ತನಿಖೆ

ಸಬ್‌ಇನ್‌ಸ್ಪೆಕ್ಟರ್ ವಿರುದ್ಧ ಹೊಸ ಹಗರಣ?

ಕೊಪ್ಪ: ಜುಲೈ 12ರಂದು "ಗಜಾನನ" ಆಟೋರಿಕ್ಷಾದಲ್ಲಿ ಪ್ರಯಾಣಿಕರೊಬ್ಬರು 2000 ರೂ. ಇದ್ದ ತಮ್ಮ ಪರ್ಸ್ ಬಿಟ್ಟದ್ದು, ಅವರು ಇಳಿಯುತ್ತಿದ್ದಂತೆಯೇ ಆಟೋ ಏರಿದ್ದ ಜೋಸೆಫ್ ಯಾನೆ ಕೊತ್ತಪ್ಪ ಎಂಬ ವ್ಯಕ್ತಿಯನ್ನು ಗಮಾನಿಯ ಮೇಲೆ ಠಾಣೆಗೆ ಕರೆಸಿ, ವಿಚಾರಣೆ ನಡೆಸಲಾಗಿತ್ತು.

ಅನಂತರ ಕೆಲವರು ಆತನನ್ನು ಆಸ್ಪತ್ರೆಗೆ ದಾಖಲು ಮಾಡಬೇಕೆಂದು ರಾತ್ರಿ ಡ್ಯೂಟಿಯಲ್ಲಿದ್ದ ಮಹಿಳಾ ವೈದ್ಯಾಧಿಕಾರಿಗಳಿಗೆ ಒತ್ತಾಯಿಸಿ, ಅಡ್ಮಿಟ್ ಮಾಡಿಸಿರುವುದಾಗಿ ತಿಳಿದುಬಂದಿದೆ. ಕಾಲಿನಮೇಲೆ "ರೋಲರ್" ಉರುಳಿಸಿದ್ದಾಗಿ ಆತ ಹೇಳುತ್ತಾರಾದರೂ ಅಂಥ ಯಾವುದೇ ಪೆಟ್ಟು ಆಗಿಲ್ಲದಿರುವುದು ಪರೀಕ್ಷೆಯಿಂದ ದೃಢಪಟ್ಟಿರುವುದಾಗಿಯೂ ಆತನಿಗೆ ಕೇವಲ ನೋವು ನಿವಾರಕ ಅನಾಲ್ಜಿನ್ ಮಾತ್ರೆಗಳನ್ನು ಮಾತ್ರ ಕೊಡಲಾಗುತ್ತಿದೆಯೆಂದೂ ಆಸ್ಪತ್ರೆ ಮೂಲಗಳಿಂದ ತಿಳಿದುಬಂದಿದೆ ಆಸ್ಪತ್ರೆಗೆ ಬಂದಿದ್ದ ಗುಂಪು ಡಾಕ್ಟರ್ ಚೇಂಬರಿನ ಕಿಟಿಕಿಯ ಪರದೆಗಳನ್ನೆಲ್ಲಾ ಕಿತ್ತು ಹಾಕಿ ಸಣ್ಣ ಗಲಭೆ ಉಂಟುಮಾಡಿದ್ದಾಗಿ ತಿಳಿದುಬಂದಿದೆ.

ಅಂತೂ ಸಬ್ ಇನ್‌ಸ್ಪೆಕ್ಟರ್ ವಿರುದ್ಧ ಮತ್ತೊಂದು ಹಗರಣ ಹೆಣೆಯಲಾಗುತ್ತಿರುವಂತಿದೆ. ಬಹಳ ದಿಟ್ಟ ಪೋಲೀಸ್ ಮುಖ್ಯಾಧಿಕಾರಿ ಎನ್ನಿಸಿರುವ ಎಸ್. ಮಹಾಪಾತ್ರ ಇವರು ಇಂಥ ವಿದ್ಯಮಾನಗಳನ್ನು ತಹಬಂದಿಗೆ ತರಬಲ್ಲರೆ? ಎಂಬುದು ಪ್ರಜ್ಞಾವಂತ ನಾಗರಿಕರ ನಿರೀಕ್ಷೆ.

ಅಡಿಕೆ ಧಾರ[illegible]

ಶಿವಮೊಗ್ಗ ತಾ|| 11.7.[illegible]

ಸರಕು: 2900 – 3[illegible]

ಬೆಟ್ಟೆ : 1709 – [illegible]

ಗೊರಬಲು: 910 – [illegible]

ಸಾಗರ ತಾ|| 11.7[illegible]

ಚಾಲಿ: ರೂ. 1561 –[illegible]

ಸಿಪ್ಪೆ ಗೋಟು: ರೂ. 3[illegible]

ಆಪಿ: ರೂ. 3[illegible]

ಜಗಜೀವನರಾಂ ಗೌರವಾರ್ಥ ರಾಷ್ಟ್ರಧ್ವಜ ಹಾರಿಸದ ಬಗ್ಗೆ ದ. ಸಂ. ಸ. ದೂರು

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಬಹು ದೀರ್ಘ ಕಾಲ ಅವಿರತವಾಗಿ ದೇಶಕ್ಕೆ ಸೇವೆ ಸಲ್ಲಿಸಿದ್ದ, ದಲಿತರ ನಾಯಕ ಬಾಬು ಜಗಜೀವನರಾಂ ಅವರ ಗೌರವಾರ್ಥ 3 ದಿನಗಳ ಕಾಲ ಎಲ್ಲ ಸರಕಾರಿ ಕಚೇರಿಗಳಲ್ಲಿ ರಾಷ್ಟ್ರಧ್ವಜವನ್ನು ಅರ್ಧ ಮಟ್ಟಕ್ಕೆ ಹಾರಿಸಬೇಕೆಂದು ಸರ್ಕಾರಿ ಆದೇಶವಾಗಿದ್ದರೂ, ಇಲ್ಲಿನ ಪೋಲೀಸ್ ಠಾಣೆ, ತಾ|| ಕಚೇರಿ, ಮತ್ತು ಕೃಷಿ ಇಲಾಖೆ ಕಚೇರಿಗಳ ಹೊರತು ಉಳಿದ ಇಲಾಖೆಗಳಿಗೆ ಸುದ್ದಿ ಮುಟ್ಟಲೇ ಇಲ್ಲವೆನ್ನುವಂತೆ ಧ್ವಜ ಹಾರಿಸದಿದ್ದ ಬಗ್ಗೆ ಇಲ್ಲಿನ ದಲಿತ ಸಂಘರ್ಷ ಸಮಿತಿ ಶಾಖೆ ಈ ಶ್ರೇಣೀಕೃತ ಜಾತಿವಾದಿ ಸಮಾಜದ ಇಂಥ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿಯೇ ಈ ಲೋಪವೆಸಗಿರುವುದೆಂದು ಶಂಕಿಸಿ ಪೋಲೀಸರಿಗೆ ದೂರು ನೀಡಿದ್ದಾರು.

ರೋಟರಿ ಪದಗ್ರಹಣ

ಕೊಪ್ಪ: ಇಲ್ಲಿನ ರೋಟರಿ ಕ್ಲಬ್ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜು. 2ರಂದು ನಡೆಯಿತು. ಕ್ಲಬ್‌ನ ಮಾಜಿ ಅಧ್ಯಕ್ಷ ಮಹಮದ್ ಸಾದಿಕ್ ಅಧ್ಯಕ್ಷತೆ ವಹಿಸಿದ್ದು ಸ್ವಾಗತಿಸಿದರು. ಮಾಜಿ ಕಾರ್ಯದರ್ಶಿ ಶ್ಯಾಂತಾರಾಂ ವರದಿ ಓದಿದರು. ಡಾ|| ಭವಾನಿ ಶಂಕರ್ ಮತ್ತು ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಪ್ರಭಾಕರ ಆರ್. ಕಲ್ಲೆ ಶುಭ ಹಾರೈಸಿದರು. ಶ್ರೀನಿವಾಸ ನಾಯ್ಕ್ ವಂದಿಸಿದರು.

1986–87ರ ಪದಾಧಿಕಾರಿಗಳು: ಕೆ. ಎಸ್. ಶಾಂತಾರಾಂ (ಅಧ್ಯಕ್ಷ), ಅಜೀಜ್ (ಉಪಾಧ್ಯಕ್ಷ), ಹೆಚ್. ಎಸ್. ಶ್ರೀನಿವಾಸ ನಾಯ್ಕ್ (ಕಾರ್ಯದರ್ಶಿ), ಎಸ್. ಉಮೇಶ್ (ಖಜಾಂಚಿ), ಅಬೂ ಮಹಮದ್ (ಸಾರ್ಜೆಂಟ್ ಅಫ್ ಅರ್ಮ್ಸ್) ಮತ್ತು ನಾಲ್ವರು ನಿರ್ದೇಶಕರು.

ಪದಾಧಿಕಾರಿಗಳು

ಕೊಪ್ಪ: ನೂರುಲ್ ಇಸ್ಲಾಂ ಅಸೋಸಿಯೇಶನ್ (ಶಾಫಿ ಜಮಾತ್)ಗೆ ಒಳಪಟ್ಟಿರುವ ನೂರುಲ್ ಇಸ್ಲಾಂ ಮದ್ರಸದ ವಿದ್ಯಾರ್ಥಿ ಸಂಘದ ಜನರಲ್ ಬಾಡಿ ಮೀಟಿಂಗ್ ಮುಖ್ಯ ಗುರುಗಳಾದ ಕೆ. ಯೂಸುಫ್ ಮುಸ್ಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. 1986–87ನೇ ಸಾಲಿನ ಕಾರ್ಯಕಾರಿ ಸಮಿತಿಗೆ 23 ಮಕ್ಕಳು ಸದಸ್ಯರಾಗಿ ಆಯ್ಕೆಗೊಂಡು ಅದರಲ್ಲಿ ಈ ಕೆಳಕಂಡ 5 ಮಂದಿ ಪದಾಧಿಕಾರಿಗಳಾಗಿದ್ದಾರೆ: ವೈ ಎ. ಉಬೈದುಲ್ಲ (ಅಧ್ಯಕ್ಷ), ಜೈನುದ್ದೀನ್ (ಉಪಾಧ್ಯಕ್ಷ), ಅಬ್ದುಲ್ ಗಫೂರ್ (ಕಾರ್ಯದರ್ಶಿ), ಹೆಚ್. ಮಹಮ್ಮದ್ (ಉಪ ಕಾರ್ಯದರ್ಶಿ), ವೈ. ಎ. ಆಯಿಶ (ಖಜಾಂಚಿ). ಮುಖ್ಯ ಅತಿಥಿಗಳಾಗಿ ಎಸ್. ಎ. ಹಾಜಬ್ಬ ಮತ್ತು ಸಮೀವ್ ಹಾಜರಿದ್ದರು.

ಶಂಕರ್ ಕಂಪೆನಿ ವಿವಾದ


(ಒಂದನೆಯ ಪುಟದಿಂದ)

ಅರ್ಥಮಾಡಿಕೊಳ್ಳಬೇಕು. ಒಂದು – ಈ ಮುಷ್ಕರ ಕೇವಲ ಒಬ್ಬ ನೌಕರನ ವರ್ಗಾವಣೆಯ ವಿರುದ್ಧ ಅಲ್ಲ. ಬದಲಿಗೆ, **ತನ್ನ ಬಾಳಿನ ಏಳಿಗ್ಗೆ ಐಕ್ಯತೆ ಆಶಾದೀವಿಗೆಯಾಗಿದ್ದ ಯೂನಿಯನ್ನಿಗೆ, ಸಧೃಕ್ಕೆ ಐಕ್ಯತೆ ಆಧಾರ ಸ್ಥಂಭವಾಗಿ ಉಳಿದಿದ್ದ ಆ 'ಒಬ್ಬ'ನನ್ನೂ ಸಹ ಮಾಲೀಕರು ಬೇಕೆಂತಲೇ ವಿನಾ ಕಾರಣ ವರ್ಗ ಮಾಡಿದ್ದರ ವಿರುದ್ಧ!** ಮಾಲೀಕರಿಗೆ ವರ್ಗಾವಣೆಯ ಹಕ್ಕು ಇರುವುದೇನೋ ನಿಜವಾದರೂ, ಅಂಥ ವರ್ಗಾವಣೆಗೆಯಾವುದೇ ದುರುದ್ದೇಶವಿರಬಾರದು; ಅದು ಕಾರ್ಮಿಕ ಸಂಬಂಧಿ ನಡವಳಿಕೆಯ ಉಲ್ಲಂಘನೆಯಾಗಿರಬಾರದು: ಸಂಘಟನಾ ಚಟುವಟಿಕೆಗಾಗಿ ಶಿಕ್ಷಾರೂಪದ್ದಾಗಿರಬಾರದು; ವರ್ಗಾವಣೆಯಿಂದ ಆ ನೌಕರನ ಆರ್ಥಿಕ ಸ್ಥಿತಿ ಕ್ಷೀಣವಾಗಬಾರದು–ಮುಂತಾದ ನಿರ್ಬಂಧನೆಗಳು ಕಾನೂನಿನಲ್ಲಿವೆ. ಈ ವರ್ಗಾವಣೆ ಈ ಎಲ್ಲಾ ವಿಧದಲ್ಲೂ ನ್ಯಾಯ ಸಮ್ಮತವಲ್ಲ ಎಂಬುದನ್ನು ಅಂದು ಕಾರ್ಮಿಕ ಅಧಿಕಾರಿಗಳೇ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ.

ಎರಡನೆಯದು–ಯಾವುದೇ ಕಾರ್ಮಿಕರಿಗೆ ಅಥವಾ ಯಾವುದೇ ಕಾರ್ಮಿಕ ಸಂಘಕ್ಕೆ ಮುಷ್ಕರ ಎಂದೂ ಮೊದಲ ಅಸ್ತ್ರವಾಗಿರುವುದಿಲ್ಲ. ಎಲ್ಲರೂ ಮುಷ್ಕರಕ್ಕಿಳಿಯುವುದನ್ನು ತಪ್ಪಿಸಿಕೊಳ್ಳಲು ಹೆಣಗುತ್ತಾರೆ. ಅದಕ್ಕಾಗಿ ತಮ್ಮ ಎಷ್ಟೇ ತುರ್ತಿನ ಬೇಡಿಕೆಗಳಿದ್ದರೂ ಸಹ ತಿಂಗಳುಗಟ್ಟಳೆ ಮನವಿ ಪತ್ರ, ನಿಯೋಗ, ಮಾತುಕತೆ ಅಂತ ಕೈಲಾದ ಎಲ್ಲ ಯತ್ನ ನಡೆಸುತ್ತಾರೆ. ಆದ್ದರಿಂದ ಸಾರ್ವಜನಿಕರ ಮೇಲ್ಕಂಡ ಆತಂಕಕ್ಕೆ ಕಾರಣವಿಲ್ಲ.

—ಸಿರಿಮನೆ ನಾಗರಾಜ್.

ಶ್ರದ್ಧಾಂಜಲಿ



ಶ್ರೀಮತಿ ಸೀತಮ್ಮ (ದಿ|| ಜೋಗಪ್ಪ, ಮೇಲಿನ ಪೇಟೆ, ಕೊಪ್ಪ, ಇವರ ಪತ್ನಿ) ಇವರು ದಿನಾಂಕ 3.7.86ರಂದು ಮಧ್ಯಾಹ್ನ 1.35 ಗಂಟೆಗೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರು 7 ಜನ ಗಂಡು ಮಕ್ಕಳು ಮತ್ತು ಐವರು ಹೆಣ್ಣು ಮಕ್ಕಳನ್ನೂ ಹಾಗೂ ಮೊಮ್ಮಕ್ಕಳು ಮತ್ತಿತರ ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ.

ಈ ಸಂಬಂಧವಾದ ವೈಕುಂಠ ಸಮಾರಾಧನೆ ದಿನಾಂಕ 15–7–86ನೇ ಮಂಗಳವಾರ ಮಧ್ಯಾಹ್ನ ಕೊಪ್ಪದ ಆರೂರು ಜಲಜಾಕ್ಷಮ್ಮ ಕಲ್ಯಾಣ ಮಂಟಪದಲ್ಲಿ ನೆರವೇರಲಿದೆ. ಆಹ್ವಾನ ಪತ್ರಿಕೆ ತಲುಪಿಲ್ಲದವರು ಇದೇ ಆಹ್ವಾನವೆಂದು ತಿಳಿದು ಆಗಮಿಸಿ, ದಿವಂಗತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

—ಮೃತರ ಸೋದರ–ಸೋದರಿಯರು, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು.

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ.

ಪ್ರ ಕ ಟ ಣೆ

ಕಿಸಾನ್ ನರ್ಸರಿ

ಈ ಮೂಲಕ ಕೊಪ್ಪ ಅರಣ್ಯ ವಿಭಾಗದ ರೈತರಿಗೆ, ಸಂಘ ಸಂಸ್ಥೆಗಳಿಗೆ, ಶಾಲಾ ಕಾಲೇಜುಗಳಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕರಿಗೆ ಮತ್ತು ಇಲಾಖೆಗೆ ಬೇಕಾಗುವ ಸಸಿಗಳನ್ನು ಬೆಳೆಯಿಸುವ ಕಾರ್ಯಕ್ರಮವನ್ನು ವಿಕೇಂದ್ರೀಕೃತಗೊಳಿಸಿ, ರೈತರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸಸಿಗಳನ್ನು ಬೆಳೆಯಿಸಿ ಅರಣ್ಯ ಇಲಾಖೆಗೆ ಪಡೆಯುವ ಹೊಸ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಸದವಕಾಶವನ್ನು ಬಳಸಿಕೊಂಡು ಅವಕಾಶವಿರುವ, ಇಚ್ಛೆಯುಳ್ಳ ರೈತರು, ಸಂಘ–ಸಂಸ್ಥೆಗಳು, ಮಹಿಳಾ ಮಂಡಳಿಗಳು, ಸಸಿಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಬೆಳೆಯಿಸಿ, ನೆಡಲು ಯೋಗ್ಯವಾದಾಗ ಅರಣ್ಯ ಇಲಾಖೆಗೆ ನಿಗದಿತ ದರದಲ್ಲಿ ನೀಡಬಹುದಾಗಿದೆ. ಈ ಬಗ್ಗೆ ನಿಯಮಗಳು ಕೆಳಕಂಡಂತಿವೆ:

1) ಇಚ್ಛೆಯುಳ್ಳ ರೈತರು ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು.
2) ಕನಿಷ್ಠ 25,000 ಸಸಿಗಳನ್ನು (ಇಲಾಖೆಗೂ ಮತ್ತು ಸಾರ್ವಜನಿಕರಿಗೂ ಬೇಕಾಗುವ ಸಸಿಗಳು) ಬೆಳೆಯಿಸಲು ಅನುಕೂಲ ಮತ್ತು ಸಾಮರ್ಥ್ಯ ಉಳ್ಳವರಾಗಿರಬೇಕು.
3) ಬೆಳೆಯಿಸುವ ಸಸಿಗಳಿಗೆ ಪೂರ್ಣ ರಕ್ಷಣೆ ಒದಗಿಸುವ ಮತ್ತು ಸದಾ ನೀರು ಹಾಕುವ ಅವಕಾಶವಿರಬೇಕು.
4) ಆರ್ಥಿಕ ನೆರವು ಬಯಸಿದವರಿಗೆ, ಮುಂಗಡ ಹಣ ನೀಡುವುದನ್ನು ಸೂಕ್ತ ಜಾಮೀನಿನ ಮೇಲೆ ಪರಿಗಣಿಸಲಾಗುವುದು.
5) ಸಸಿ ಬೆಳೆಯಿಸಲು ಬೇಕಾಗುವ ಬೀಜ ಮತ್ತು ಪ್ಲಾಸ್ಟಿಕ್ ಚೀಲಗಳನ್ನು ಇಲಾಖೆಯೇ ಒದಗಿಸುವುದು. ಬೇಕಾಗುವ ಗೊಬ್ಬರ, ಕೆಂಪು ಮಣ್ಣು ಮತ್ತು ಮರಳನ್ನು ರೈತರೇ ಸಂಗ್ರಹಿಸಿಕೊಳ್ಳಬೇಕು. ಬೆಳೆಯಿಸುವ ವಿಧಾನದ ಬಗ್ಗೆ ಇಲಾಖೆಯ ಸಿಬ್ಬಂದಿಗಳು ಪೂರ್ಣ ಮಾಹಿತಿ ಒದಗಿಸುತ್ತಾರೆ ಹಾಗೂ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ.
6) ಸಸಿಗಳು ಬೆಳೆದು ನೆಡಲು ಯೋಗ್ಯವಾದ ಸಸಿಗಳನ್ನು ಇಲಾಖೆಯು ನಿಗದಿತ ಈ ಕೆಳಕಂಡ ದರದಲ್ಲಿ ಖರೀದಿಸುವುದು:

(1) 4"X6" ಅಳತೆಯ ಪ್ಲಾಸ್ಟಿಕ್ ಚೀಲದಲ್ಲಿರುವ ಪ್ರತಿ ಸಸಿಗೆ 0.14 ಪೈಸೆ
(2) 5"X8" —"— 0.28 ಪೈಸೆ

ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದು.

ತಾರೀಖು : 5 ಜುಲೈ 1986

(ಸಹಿ) ವಿನಯ್ ಲೂಥ್ರ,
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್. ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.